ಸಾಕ್ಷಿಯನ್ನು **ದಿಃ 17.06.2026** ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು

**ಪಾಟೀ ಸವಾಲುಃ ಎದುರುದಾರರ ಪರ ಡಿಜಿಪಿ ರವರಿಂದ**

1. ಮೃತ ಮೇಲ್ಮನವಿದಾರರಾದ ಬಸವಯ್ಯ ನನ್ನ ತಂದೆಯಾಗಿರುತ್ತಾರೆ, ಚಿಕ್ಕತಾಯಮ್ಮ ನನ್ನ ತಾಯಿ, ಮಾಲಮ್ಮ, ಯಶೋಧಾ ಮತ್ತು ಚಂದ್ರಮ್ಮ ನನ್ನ ಅಕ್ಕಂದಿರು, ರಮೇಶ ಮತ್ತು ಬಸಪ್ಪ ನನ್ನ ಅಣ್ಣಂದಿರು, ಸತೀಶ್ ನನ್ನ ತಮ್ಮ. ದಿ–05.12.2024 ರಂದು ನನ್ನ ತಂದೆ ತೀರಿಕೊಂಡಿರುತ್ತಾರೆ. ನನ್ನ ತಂದೆ ಮೇಲ್ಮನವಿ ಹಾಕಿದ್ದರ ಬಗ್ಗೆ ನನಗೆ ಗೊತ್ತಿರಲಿಲ್ಲ. ನನ್ನ ತಂದೆಯ ವಕೀಲರು ನನಗೆ ಸದರಿ ವಿಚಾರವನ್ನು ತಿಳಿಸಿದ ನಂತರ ನನಗೆ ಗೊತ್ತಾಗಿರುತ್ತದೆ. ನನ್ನ ತಂದೆ ತೀರಿ ಹೋದ 3 ತಿಂಗಳ ನಂತರ ನನ್ನ ತಂದೆ ವಕೀಲರು ಸದರಿ ವಿಚಾರವನ್ನು ನನಗೆ ತಿಳಿಸಿರುತ್ತಾರೆ. ವಾರಸುದಾರ ಅರ್ಜಿ ಸಲ್ಲಿಸುವಲ್ಲಿ 173 ದಿನಗಳ ವಿಳಂಭವಾಗಿರುತ್ತದೆ ಎಂದರೆ ಸರಿ. ಅರ್ಜಿಯಲ್ಲಿ ಸದರಿ ವಿಳಂಭಕ್ಕೆ ಸಕಾರಣಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆದುದರಿಂದ ನನ್ನ ಅರ್ಜಿಯು ವಜಾ ಆಗಲು ಅರ್ಹವಾಗಿರುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆ –ಇಲ್ಲ.**

(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)

ಓ ಹೇ ಕೇ ಸ ಇ ಎ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು